



ಬ್ರೆಜಿಲಿನ ಕಡೆ ಸುಮಾರು 4 ಕಿ.ಮೀ. ನಡೆಯುತ್ತಾ ಜಲಪಾತದ ಜಲಧಾರೆಗಳನ್ನು ನೋಡಬಹುದು. ಅರ್ಜೆಂಟೀನಾ ಕಡೆ ಪುಟಾಣಿ ರೈಲು ಪ್ರವಾಸಿಗರನ್ನು ಕರೆದೊಯ್ದು ಹಾದಿಯುದ್ದಕ್ಕೂ ಜಲಪಾತವನ್ನು ತೋರಿಸುತ್ತದೆ. ನಂತರ ನಡೆದು ಕೂಡ ನೋಡಬಹುದಾಗಿದೆ. ಇದಲ್ಲದೆ ಜಲಪಾತದ ನೀರಿನಿಂದ ತೋಯಿಸುವ ದೋಣಿ ವಿಹಾರವೂ ಇದೆ. ಬ್ರೆಜಿಲ್ ಕಡೆಯಿಂದ ಹೆಲಿಕಾಪ್ಟರಿನಲ್ಲೂ ಜಲಪಾತ ವೀಕ್ಷಣೆ ಮಾಡಬಹುದು.

## ಡೆವಿಲ್ಸ್ ಥ್ರೋಟ್

ಇಂಗ್ಲಿಷ್‌ನ 'ಜೆ' ರೀತಿ ಇರುವ ಇಗ್ವಾಸುವಿನ ಕೊಕ್ಕಿಯಂತಹ ಕೊರಳನ್ನು 'ಡೆವಿಲ್ಸ್ ಥ್ರೋಟ್' ಎಂದು ಕರೆಯುವರು. ಅಲ್ಲಿ 82 ಮೀಟರ್ ಎತ್ತರ, 700 ಮೀಟರ್ ಅಗಲವಾದ ಧಾರೆಯ ಬೃಹತ್ ಪ್ರಮಾಣದ ನೀರು ಧುಮ್ಮಿಕ್ಕುತ್ತದೆ. ಕಮಾನಿನ ಆಕಾರದಲ್ಲಿ ಒಂದು ಸೆಕೆಂಡಿಗೆ 13 ದಶಲಕ್ಷ ಲೀಟರ್ ನೀರು ಧಾರಾಕಾರವಾಗಿ ಇಲ್ಲಿ ಬೀಳುತ್ತದೆ. ಜಲಪಾತದ ತಳ ಕಾಣದ ರೀತಿಯಲ್ಲಿ ನೀರಿನ ಮಂಜು ಆವರಿಸಿರುತ್ತದೆ. ಸುಮಾರು 17 ಮೈಲಿ ಅಗಲದಲ್ಲಿ ಹರಡಿಕೊಂಡಿರುವ ಇಗ್ವಾಸು ನದಿಯ ಅರ್ಧದಷ್ಟು ನೀರು ಡೆವಿಲ್ ಥ್ರೋಟ್ ಜಲಪಾತದಲ್ಲಿ ಧುಮ್ಮಿಕ್ಕುತ್ತದೆ. ಜಲಪಾತದ ಆಳ 197ರಿಂದ 269 ಅಡಿಗಳವರೆಗೂ ಇದೆ.

## ಇಗ್ವಾಸು ನ್ಯಾಷನಲ್ ಪಾರ್ಕ್

ಇಗ್ವಾಸು ಸುತ್ತಮುತ್ತ ಅದ್ಭುತ ಜೀವಸಂಕುಲವಿದೆ. ಪ್ರಕೃತಿಯನ್ನು ಸಂರಕ್ಷಿಸುವ ಉದ್ದೇಶದಿಂದ 'ಇಗ್ವಾಸು ನ್ಯಾಷನಲ್ ಪಾರ್ಕ್' ರೂಪಿಸಲಾಗಿದೆ.

ಸುಮಾರು 2000ಕ್ಕೂ ಅಧಿಕ ಸಸ್ಯ ವೈವಿಧ್ಯ, 80 ಜಾತಿಯ ಮರಗಳು, 400 ಪಕ್ಷಿ ಪ್ರಭೇದಗಳು, ಜಾಗ್ವಾರ್ ಸೇರಿದಂತೆ ಕಾಡುಬೆಕ್ಕಿನ ಜಾತಿಗೆ ಸೇರಿದ ವಿವಿಧ ಪ್ರಾಣಿಗಳು ಇಗ್ವಾಸು ಸುತ್ತಲಿನ ಅರಣ್ಯಪ್ರದೇಶದಲ್ಲಿವೆ. ಜಲಪಾತವನ್ನು ನೋಡುತ್ತಾ ಹೋಗುವಾಗ ದಾರಿಯುದ್ದಕ್ಕೂ ಇಕ್ಕೆಲಗಳಲ್ಲಿ ಬಿದ್ದಿರುವ ಹೂವು ಹಣ್ಣುಗಳೊಂದಿಗೆ ಸಸ್ಯ ಸಮೃದ್ಧಿ ಹಾಗೂ ಜೀವವೈವಿಧ್ಯ ಮನಸೆಳೆಯುತ್ತವೆ.



ಹಸುರ ನಡುವಣ ಜಲವೈಭವ